# ನಿಮ್ಮೊಡನೆ

## ರಿಯಾಲಿಟಿ ಟಿವಿ ಷೋ....

ನಮ್ಮ ದಿನನಿತ್ಯದ ಬದುಕನ್ನು ಟಿವಿ ಕಾರ್ಯಕ್ರಮಗಳು ಆವರಿಸಿಕೊಂಡಿರುವಂತಹ ಕಾಲಘಟ್ಟ ಇದು. ದೈನಂದಿನ ಮಾತುಕತೆಗಳು, ಜೀವನಶೈಲಿಗಳಲ್ಲೆಲ್ಲಾ ಟಿವಿ ಕಾರ್ಯಕ್ರಮಗಳ ಪ್ರಸ್ತಾಪಗಳು ಇದ್ದೇ ಇರುತ್ತವೆ. ನಮ್ಮ ಮನೆಯ ಹಜಾರ ಅಥವಾ ಲಿವಿಂಗ್‌ರೂಮ್‌ನಲ್ಲಿ ಟಿವಿ ಪ್ರಧಾನ ಸ್ಥಾನ ಗಳಿಸಿಕೊಂಡಿರುವುದು ಎಲ್ಲರಿಗೂ ಗೊತ್ತು.

ಬೆಳಗಿನ ಪ್ರವಚನ, ಪೂಜೆಪುನಸ್ಕಾರ, ಯೋಗ, ಜ್ಯೋತಿಷದಂತಹ ಕಾರ್ಯಕ್ರಮಗಳ ಜೊತೆಜೊತೆಗೇ ದಿನವಿಡೀ ಅತಿರಂಜಿತ ವರದಿಗಳು, ಮೆಗಾಸೀರಿಯಲ್‌ಗಳು, ಹಲ ಬಗೆಯ ರಿಯಾಲಿಟಿ ಷೋಗಳು ಹಾಗೂ ಅಪರಾಧಲೋಕದ ವರದಿಗಳ ಬಿಂಬಗಳು, ಧ್ವನಿಗಳು ನಮ್ಮ ಮನೋಲೋಕವನ್ನು ವ್ಯಾಪಿಸಿಕೊಳ್ಳುವಂತಹ ಸಂದರ್ಭದಲ್ಲಿ ನಾವಿದ್ದೇವೆ. ಆದರೆ ಈ ಕಾರ್ಯಕ್ರಮಗಳನ್ನು ಸ್ವೀಕರಿಸುವ ವೀಕ್ಷಕವರ್ಗದ ಮೇಲೆ ಆಗುತ್ತಿರುವ ಪರಿಣಾಮಗಳೇನು? ರಿಯಾಲಿಟಿ ಷೋಗಳ ಹೆಸರಿನಲ್ಲಿ ನಡೆಸಲಾಗುತ್ತಿರುವ ಏನೆಲ್ಲಾ ವಿಕೃತಿಗಳು ಸಮಾಜದ ಸ್ವಾಸ್ಥ್ಯದ ಮೇಲೆ ಬೀರುತ್ತಿರುವ ಪರಿಣಾಮಗಳಾದರೂ ಏನು? ಈ ಬಗ್ಗೆ ವ್ಯವಸ್ಥಿತ ಅಧ್ಯಯನವಂತೂ ನಡೆದಿಲ್ಲ. ಆದರೆ ಇದು ಬೀರುತ್ತಿರುವ ವಿನಾಶಕಾರಿ ಪರಿಣಾಮಗಳ ಬಗ್ಗೆ ಮಾಧ್ಯಮಗಳಲ್ಲಿ ಅನೇಕ ಬಾರಿ ವರದಿಯಾಗಿದೆ. ಇತ್ತೀಚೆಗೆ ವರದಿಯಾಗಿರುವ ಎರಡು ಪ್ರಕರಣಗಳನ್ನೇ ಗಮನಿಸಿ. ಪಶ್ಚಿಮ ಬಂಗಾಳದ ಪರ್ಗನಾಸ್ ಜಿಲ್ಲೆಯಲ್ಲಿ ಐದನೇ ತರಗತಿಯ ಒಂಬತ್ತು ವರ್ಷದ ಬಾಲಕ ಸಂದೀಪ್ ಮೊಂದಲ್ ಕಳೆದ ವಾರ ಫ್ಯಾನ್‌ಗೆ ನೇಣು ಹಾಕಿಕೊಂಡು ಸತ್ತಿದ್ದಾನೆ. ಟೆಲಿವಿಷನ್‌ನ ವಿವಿಧ ಡ್ಯಾನ್ಸ್ ರಿಯಾಲಿಟಿ ಷೋಗಳಲ್ಲಿ ಪಾಲ್ಗೊಳ್ಳಲು ಅಗತ್ಯವಾದಂತಹ ಅರ್ಹತಾ ಪರೀಕ್ಷೆಗಳಲ್ಲಿ ಭಾಗವಹಿಸಿ ವಿಫಲನಾಗಿದ್ದ ಸಂದೀಪ್ ಖಿನ್ನತೆಗೆ ಜಾರಿದ್ದ ಎಂದು ಪೊಲೀಸರು ಹೇಳಿದ್ದಾರೆ. ಮತ್ತೊಂದು ಘಟನೆಯಲ್ಲಿ, ಪತಿಗೆ ಮತ್ತೊಂದು ವಿವಾಹದ ಸಂಭವ ಇದೆ ಎಂದು ಜ್ಯೋತಿಷಿ ಹೇಳಿದ ಭವಿಷ್ಯ ನಂಬಿ ಖಿನ್ನತೆಗೆ ಜಾರಿದ್ದ ತಿಪಟೂರು ಬಳಿಯ ಗೃಹಿಣಿ ಲತಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಟೆಲಿವಿಷನ್ ಕಾರ್ಯಕ್ರಮದ ನೇರ ಪ್ರಸ್ತಾಪ ಇಲ್ಲ. ಸರಿ. ಆದರೆ ಟಿವಿ ಕಾರ್ಯಕ್ರಮಗಳಲ್ಲಿ ಜ್ಯೋತಿಷ ಕಾರ್ಯಕ್ರಮವೂ ಟಿವಿ ಸೀರಿಯಲ್‌ಗಳಷ್ಟೇ ಜನಪ್ರಿಯ ಎಂಬುದನ್ನು ಮರೆಯಲಾಗದು. ಪ್ರತಿಯೊಂದಕ್ಕೂ ಜ್ಯೋತಿಷವನ್ನೇ ಅವಲಂಬಿಸುವ, ಮನಸ್ಸುಗಳನ್ನು ದುರ್ಬಲಗೊಳಿಸುತ್ತಾ ಸಾಗುವ, ತಾರ್ಕಿಕತೆಯ ಮಹತ್ವವನ್ನೇ ಕಡಿಮೆ ಮಾಡುತ್ತಿರುವಂತಹ ಅಪಾಯ ಹಲವು ಟಿ ವಿ ಕಾರ್ಯಕ್ರಮಗಳಲ್ಲಿವೆ. ಹೀಗಾಗಿಯೇ ಸಾರ್ವಜನಿಕ ಪ್ರಜ್ಞಾವಲಯದೊಳಗೆ ಗಟ್ಟಿಯಾಗಿ ನೆಲೆಸುವ ಇಂತಹ ಪ್ರಭಾವಗಳು ಪರೋಕ್ಷವಾಗಿ ಈ ಆತ್ಮಹತ್ಯೆಗೆ ಪ್ರೇರಣೆಯಾಗಿರಬಹುದೆ ಎಂಬಂತಹ ವಿಶ್ಲೇಷಣೆಗೆ ಈ ಪ್ರಕರಣವೂ ಅನುವು ಮಾಡಿಕೊಡುತ್ತದೆ.

ಏಕೆಂದರೆ ಟಿವಿಯ ಪ್ರಭಾವ ಅಷ್ಟೊಂದು ಉದ್ದಗಲಕ್ಕೀಗ ವ್ಯಾಪಿಸಿಕೊಂಡಿದೆ. ಸಮೀಕ್ಷೆಯೊಂದರ ಪ್ರಕಾರ, 2000ದಲ್ಲಿ ನಮಗಿದ್ದ ಚಾನೆಲ್‌ಗಳ ಆಯ್ಕೆ ಸುಮಾರು ಐವತ್ತು. 2010ಕ್ಕೆ ನಾವು ವಿದಾಯ ಹೇಳುತ್ತಿದ್ದಂತೆ, 581 ಖಾಸಗಿ ಉಪಗ್ರಹ ಚಾನೆಲ್‌ಗಳು ಭಾರತದಲ್ಲಿವೆ, ಇದರ ಜೊತೆಗೆ ಸರ್ಕಾರಿ ಸ್ವಾಮ್ಯದ ದೂರದರ್ಶನದ 31ಕ್ಕೂ ಹೆಚ್ಚು ಚಾನೆಲ್‌ಗಳೂ ನಿರಂತರ ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತಿವೆ. 10 ವರ್ಷಗಳ ಹಿಂದೆ ಕೇಬಲ್ ಹಾಗೂ ಸ್ಯಾಟಲೈಟ್ ಮನೆಗಳು ( ಸಿ ಅಂಡ್ ಎಸ್ ಹೋಮ್ಸ್) 2.5 ಕೋಟಿ ಇದ್ದದ್ದು ಈಗ 12 ಕೋಟಿ ಆಗಿದೆ. ಎಂದರೆ ಟಿವಿಯ ಪ್ರಭಾವವನ್ನು ಅಲ್ಲಗಳೆಯುವಂತಿಲ್ಲ.

ಈ ಹಿನ್ನೆಲೆಯಲ್ಲೇ ಟಿವಿ ಕಾರ್ಯಕ್ರಮಗಳ ಹೊಣೆಗಾರಿಕೆ ಹೆಚ್ಚಿನದಾಗುತ್ತದೆ. ರಿಯಾಲಿಟಿ ಷೋಗಳು ಮಕ್ಕಳ ಮೇಲೆ ಈ ಬಗೆಯ ಹಾನಿಕಾರಕ ಪರಿಣಾಮ ಬೀರಿದ್ದು ಇದೇ ಮೊದಲ ಬಾರಿ ಏನಲ್ಲ. 2008ರ ಜೂನ್‌ನಲ್ಲಿ ಬಂಗಾಳಿ ಟಿವಿ ಚಾನೆಲ್ ಒಂದರ ಡಾನ್ಸ್ ಷೋ ನಲ್ಲಿ ತೀರ್ಪುಗಾರರ ನಿಂದನೆಗಳಿಂದ ತೀವ್ರ ಆಘಾತಕ್ಕೊಳಗಾದ ಶಿಂಜಿನಿ ಸೇನ್‌ಗುಪ್ತ ಪಾರ್ಶ್ವವಾಯು ಪೀಡಿತಳಾಗಿ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆದಿದ್ದ ಸಂಗತಿಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಮಕ್ಕಳ ಮನಗಳ ಮೇಲೆ ಹಲಬಗೆಯ ಹಾನಿಕಾರಕ ಪರಿಣಾಮಗಳನ್ನು ಬೀರಬಲ್ಲ ರಿಯಾಲಿಟಿ ಷೋಗಳಲ್ಲಿ ಪಾಲ್ಗೊಳ್ಳುವ ಮಕ್ಕಳು 'ಬಾಲ ಕಾರ್ಮಿಕ'ರಂತೆ ಎಂದು ವರ್ಗೀಕರಿಸುವುದೂ ಉಂಟು. ಏಕೆಂದರೆ, ರಿಯಾಲಿಟಿ ಷೋಗಳ ಒತ್ತಡಗಳನ್ನು ನಿಭಾಯಿಸುವಷ್ಟು ಮಕ್ಕಳು ಪ್ರಬುದ್ಧರಾಗಿರುವುದಿಲ್ಲ. ವಿಪರ್ಯಾಸ ಎಂದರೆ ಈ ದಿನಗಳಲ್ಲಿ ಮಕ್ಕಳು ಹಾಗೂ ಯುವಸಮುದಾಯಕ್ಕೆ ರಿಯಾಲಿಟಿ ಷೋಗಳ ಸೆಳೆತವೇ ಹೆಚ್ಚು; ಕಾಲ್ಪನಿಕ ಕಥಾವಸ್ತು ಹೊಂದಿದ ಷೋಗಳು, ಸೋಪ್ ಅಪೆರಾಗಳು ಈ ತಲೆಮಾರಿನವರಿಗೆ ಅಷ್ಟೇನೂ ರುಚಿಸುವುದಿಲ್ಲ ಎಂದು ಸಮೀಕ್ಷೆಯೊಂದು ಬಹಿರಂಗಪಡಿಸಿದೆ. 12ರಿಂದ 18ರ ವಯೋಮಾನದ ಶೇ76ರಷ್ಟು ಮಕ್ಕಳು ಒಬ್ಬರೇ ಇದ್ದಾಗ ರಿಯಾಲಿಟಿ ಷೋಗಳನ್ನೇ ನೋಡಲು ಬಯಸುತ್ತಾರೆ ಎಂದು ಅಸೋಚಾಮ್ (ಭಾರತ ವಾಣಿಜ್ಯೋದ್ಯಮ ಮಂಡಳಿ)ನ ಕಳೆದ ನವೆಂಬರ್ ತಿಂಗಳ ಪ್ರಕಟಣೆ ತಿಳಿಸಿದೆ. ಈ ಹಿನ್ನೆಲೆಯಲ್ಲಿ ರಿಯಾಲಿಟಿ ಷೋಗಳ ಪರಿಣಾಮಗಳನ್ನು ಕುರಿತಂತೆ ವೈಜ್ಞಾನಿಕ ಅಧ್ಯಯನ ಹಾಗೂ ಚರ್ಚೆಗಳು ನಮ್ಮ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವ ನಿಟ್ಟಿನಲ್ಲಿ ನಮ್ಮ ಅರಿವಿನ ಲೋಕವನ್ನು ವಿಸ್ತರಿಸಬೇಕಿದೆ.

■ ಸಿ. ಜಿ. ಮಂಜುಳಾ

ರಿಯಾಲಿಟಿ ಷೋಗಳ ಹೆಸರಿನಲ್ಲಿ ನಡೆಸಲಾಗುತ್ತಿರುವ ಏನೆಲ್ಲಾ ವಿಕೃತಿಗಳು ಸಮಾಜದ ಸ್ವಾಸ್ಥ್ಯದ ಮೇಲೆ ಬೀರುತ್ತಿರುವ ಪರಿಣಾಮಗಳಾದರೂ ಏನು? ಈ ಬಗ್ಗೆ ವ್ಯವಸ್ಥಿತ ಅಧ್ಯಯನವಂತೂ ನಡೆದಿಲ್ಲ.

